ಆ) ಬೆಂಗಳೂರು ನಗರದ ಲಾಲ್‌ಬಾಗ್ ಮುಂದೆ ಕೆಂಪೇಗೌಡರ ಪ್ರತಿಮೆಯನ್ನು ಸ್ಥಾಪಿಸುವ ವಿಷಯವು ಸರ್ಕಾರದ ಮುಂದೆ ಇದೆಯೇ?

ಇ) ಇಲ್ಲದಿದ್ದಲ್ಲಿ, ಪ್ರತಿದಿನ ಸಾವಿರಾರು ಜನ ಪ್ರವಾಸಿಗಳು ಬರತಕ್ಕ ಲಾಲ್‌ಬಾಗ್ ಮುಂದೆ ಈ ಪ್ರತಿಮೆಯನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಬೆಂಗಳೂರು ನಗರ ನಿರ್ಮಾಪಕ ಕೆಂಪೇಗೌಡರ ಪ್ರತಿಮೆಯನ್ನು ಬೆಂಗಳೂರು ಮಹಾನಗರ ಪಾಲಿಕೆ ಕಛೇರಿಗಳ ಮುಂದೆ ಶ್ರೀ ನರಸಿಂಹರಾಜ ಚೌಕದಲ್ಲಿ ಸ್ಥಾಪಿಸಲಾಗಿದೆ.

ಆ) ಇಲ್ಲ.

ಇ) ಮೇಲಿನ (ಅ)ನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ರಾಜ್ಯದಲ್ಲಿ ಅಬಕಾರಿ ಹರಾಜು ಕುರಿತು.

Q : 1848

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಬಕಾರಿ ಹರಾಜು ತಾಲ್ಲೂಕುವಾರು ನಡೆಯುತಲಿದ್ದು ಕೆಲವೇ ಜನರು ಹರಾಜಿನಲ್ಲಿ ಭಾಗವಹಿಸುತ್ತಲಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ತಾಲ್ಲೂಕುವಾರು ಹರಾಜಿನಲ್ಲಿ ಗೆಲ್ಲುವವರು ಮತ್ತೆ ಅವರೇ ಅಂಗಡಿವಾರು ಬೇರೆ ಜನರಿಗೆ ಲಾಭಕ್ಕೆ ಮಾರಿ ಸಾಮಾನ್ಯ ಜನರನ್ನು ಶೋಷಿಸುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಇ) ಹೌದಾದರೇ, ತಾಲ್ಲೂಕಿನ ಹೆಸರಿನಲ್ಲಿ ಹಣ ಮಾಡುವ ವ್ಯವಸ್ಥೆ ತಪ್ಪಿಸಿ ಅಂಗಡಿವಾರು ಹರಾಜು ಮಾಡಲು ಸರ್ಕಾರವು ದೃಢ ನಿರ್ಧಾರ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :

ಅ) - ಇಲ್ಲಾ -

ಆ) - ಇಲ್ಲಾ -

ಇ) (ಅ)ಗೆ ನೀಡಿರುವ ಉತ್ತರದಿಂದಾಗಿ ಉದ್ಭವಿಸುವುದಿಲ್ಲ. ಆದರೆ ಅಂಗಡಿಗಳನ್ನು ಮಂಡಲವಾರು ಹರಾಜು ಮಾಡಲು ತೀರ್ಮಾನಿಸಲಾಗಿದೆ.

ವಿಷಯ : ಸಾರಾಯಿ ಬಾಟ್ಲಿಂಗ್ ಲೈಸನ್ಸ್‌ದಾರರ ಅಕ್ರಮ ವ್ಯವಹಾರ ಕುರಿತು.

Q : 2203

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸಾರಾಯಿ ಬಾಟ್ಲಿಂಗ್ ಮತ್ತು ಕೆಲವು ಗಡಿ ಪ್ರದೇಶಗಳ ಅಕ್ರಮ ವ್ಯವಹಾರಗಳ ಬಗ್ಗೆ ಸದನದ ಶಾಸನ ರಚನಾ ಸಮಿತಿಯ ವರದಿಯ ಶಿಫಾರಸ್ಸಿನ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಆ) ಕೆಲವು ಬಾಟ್ಲಿಂಗ್ ಲೈಸನ್ಸ್‌ದಾರರ ಅಕ್ರಮ ವ್ಯವಹಾರಗಳನ್ನು ಗುರುತಿಸಲಾಗಿದ್ದು, ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಇ) ಕೆಲವು ಅಬಕಾರಿ ಕಂಟ್ರಾಕ್ಟರ್‌ಗಳ ಬಗ್ಗೆಯೂ ಅಕ್ರಮ ವ್ಯವಹಾರ ವರದಿಯಾಗಿದೆ ಇದರ ಬಗ್ಗೆ ತೆಗೆದುಕೊಳ್ಳಲಾಗಿರುವ ಕ್ರಮವೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :

ಅ) ಸದನದ ಶಾಸನ ರಚನಾ ಸಮಿತಿಯ ವರದಿಯ ಶಿಫಾರಸ್ಸಿನ ಮೇರೆಗೆ ಕೆಳಕಂಡ ಅಧಿಕಾರಿಗಳಿಗೆ ಅಬಕಾರಿ ಆಯುಕ್ತರ ಮೂಲಕ ಕಾರಣ ಕೇಳಿ ನೋಟೀಸನ್ನು ಕೊಡಲಾಗಿದ್ದು ಅವರುಗಳಿಂಗ ಬಂದಿರತಕ್ಕಂಥ ವಿವರಣೆಗಳನ್ನು ಪರಿಶೀಲಿಸಿಲಾಗುತ್ತಿದೆ. ತಪ್ಪಿತಸ್ಥರೆಂದು ಕಂಡು ಬಂದಲ್ಲಿ, ಸಿಸಿಎ ನಿಯಮಗಳ ಪ್ರಕಾರ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

(1) ಶ್ರೀ ರಾಯರಾಮ್ ಉಪ ಆಯುಕ್ತರು (ಅಬಕಾರಿ), ಗುಲ್ಬರ್ಗಾ
(2) ಶ್ರೀ ಕೃಷ್ಣಪ್ಪ ನಾಯಕ್ ಉಪಆಯುಕ್ತರು (ಇ ಅಂಡ್ ಐ), ಗುಲ್ಬರ್ಗಾ
(3) .ಶ್ರೀ ಕೆ.ಎಲ್. ತಿವಾರಿ ಅಬಕಾರಿ ಅಧೀಕ್ಷಕರು, ಗುಲ್ಬರ್ಗಾ

ಶೋರಾಪುರದ ಅಬಕಾರಿ ರೇಂಜಿನ ಇನ್ಸ್‌ಪೆಕ್ಟರ್ ಆದ ಶ್ರೀ ಹಸನ್‌ಖಾನ್ ಎಂಬುವವರನ್ನು ಅಮಾನತ್ತಿನಲ್ಲಿಟ್ಟು ತನಿಖೆಗೆ ಆಜ್ಞಾಪಿಸಲಾಗಿದೆ.

ಈ ಸಂಬಂಧದಲ್ಲಿ ಗುಲ್ಬರ್ಗಾ ಜಿಲ್ಲೆಯ ಅಬಕಾರಿ ಅಧಿಕಾರಿಗಳು ಸುಮಾರು 9234 ಲೀಟರ್ ಬಲ್ಕ್ ಸಾರಾಯಿಯನ್ನು, ಹಾಗೂ 753 ಲೀಟರ್ ಶೇಂದಿಯನ್ನು ವಶಪಡಿಸಿಕೊಂಡು ಮೊಕದ್ದಮೆಗಳನ್ನು ದಾಖಲು ಮಾಡಿದ್ದಾರೆ.

ಆ) ಸಮಿತಿಯವರು ತುಮಕೂರಿನ ಬಿ.ಟಿ. ಮತ್ತು ಎಫ್.ಸಿ ನಿಯಮಿತ ಸಾರಾಯಿ ಬಾಟ್ಲಿಂಗ್ ಘಟಕಕ್ಕೆ ಬೇಟಿಯಿತ್ತು ಶಿಫಾರಸ್ಸು ಮಾಡಿದ ಪ್ರಕಾರ ಕಾರ್ಮಿಕ ಇಲಾಖೆಯವರಿಗೆ ಈ ಘಟಕಕ್ಕೆ ಬೇಟಿ ಕೊಡದೇ ಇರುವುದರ ಬಗ್ಗೆ ಸಮಜಾಯಿಸಿ ಕೇಳಲಾಗಿದೆ. ಮತ್ತು ಹಿರಿಯೂರಿನ ಬಿಟಿ ಮತ್ತು ಎಫ್‌ಸಿ ಮದ್ಯ ತಯಾರಿಕೆ ಘಟಕಕ್ಕೆ ಬೇಟಿಯಿತ್ತಾಗ ಸದರಿ ಘಟಕದವರ ಮಾಲಿನ್ಯವನ್ನು ತಡೆಗಟ್ಟಲು ಎಫ್ಲ್ಯೂಎಂಟ್ ಟ್ರೀಟ್‌ಮೆಂಟ್ ಮಾಡಬೇಕೆಂದು ನಿರ್ದೇಶಿಸಿದ್ದಾರೆ. ಆ ಮೇರೆಗೆ ಅಬಕಾರಿ ಇಲಾಖೆಯ